ಇಂದು ದಿನಾಂಕಃ 03-08-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ವಾದಿಯ ಪರವಾಗಿಃ ಶ್ರೀ ಎಸ್.ಎ.ಎಮ್. ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತದೆ.

**2.** ಸ.ನಂ. 71/1, ಸ.ನಂ. 71/2, ಸ.ನಂ. 103/2+3/1, ಸ.ನಂ. 60/11, ಸ.ನಂ. 82, ಸ.ನಂ. 60 ಅ, ಸ.ನಂ. 72/2, ಸ.ನಂ. 60/9 ಅ, ಸ.ನಂ. 60/7 ಬ 1, ಸ.ನಂ. 60/6, ಸ.ನಂ. 60/5, ಸ.ನಂ. 55, ಸ.ನಂ. 214/1, ಸ.ನಂ. 190 ಅ/ಅ ಒಟ್ಟೂ 14 ಪಹಣಿಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿ.ಪಿ.1 ರಿಂದ ನಿ.ಪಿ. 14 ಎಂದು ಗುರುತಿಸಲಾಯಿತು.

**3.** ಆದ್ದರಿಂದ ದಾವೆಯಲ್ಲಿ ಕೋರಿರುವಂತೆ ಆದೇಶ ಮಾಡಬೇಕೆಂದು ಪ್ರಾರ್ಥನೆ.

**ಪಾಟೀ ಸವಾಲುಃ 1 ನೇ ಪ್ರತಿವಾದಿ ಪರವಾಗಿಃ ಶ್ರೀ ಸಿ.ಎಮ್.ಹೆಚ್. ವಕೀಲರಿಂದ :**

ಏನೂ ಇಲ್ಲ.

**ಪಾಟೀ ಸವಾಲುಃ 3 ನೇ ಪ್ರತಿವಾದಿ ಪರವಾಗಿಃ ಶ್ರೀ ಎಂ.ಎನ್.ಎಸ್. ವಕೀಲರಿಂದ :**

**4.** ದಾವಾ 'ಎ' ಶೆಡ್ಯೂಲ್ ಸ.ನಂ. 71/1 ರಲ್ಲಿ ಮನೆ ಇದೆ ಎಂದರೆ ಸರಿ . ಹಾಗೇ ಅದರಲ್ಲಿ 2 ಕಮರ್ಶಿಯಲ್ ಅಂಗಡಿಗಳೂ ಇವೆ ಎಂದರೆ ಸರಿ . ವಾಸ್ತವ್ಯದ ಮನೆಯ ನಂಬರ್ ಗೊತ್ತಿಲ್ಲ. ವಾಸ್ತವ್ಯದ ಮನೆ ಬಿಟ್ಟು ಒಂದು ಔಟ್ ಹೌಸ್ ಮತ್ತು ಅದಕ್ಕೆ ಹೊಂದಿಕೊಂಡಂತೆ ಒಂದು ಸಣ್ಣ ಮನೆ ಇದೆ . ಒಟ್ಟೂ 3 ಕಟ್ಟಡಗಳು ಇವೆ. ಕಮರ್ಶಿಯಲ್ ಶಾಪ್‌ಗಳು ಒಂದಕ್ಕೊಂದು ಹೊಂದಿಕೊಂಡು ಇವೆ.

**5.** ಸ.ನಂ. 71/2 ಇದು ಮನೆಯ ಹಿಂದುಗಡೆ ಬರುತ್ತದೆ . 3 ವಾಸ್ತವ್ಯದ ಮನೆ ಹಾಗೂ 2 ಕಮರ್ಶಿಯಲ್ ಶಾಪ್‌ಗಳಿಗೆ ಮುನ್ಸಿಪಾಲ್ಟಿಯವರು ಬೇರೆ ಬೇರೆ ಪ್ರತ್ಯೇಕ ನಂಬರಗಳನ್ನು ಕೊಟ್ಟಿದ್ದಾರೆ ಎಂದರೆ ಸರಿ. ಮುನ್ಸಿಪಲ್ ನಂಬರ್ ಆಗಿರುವ ಪುರಸಭೆಯ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ..

**6.** ಸ.ನಂ. 103 ಹಳೇಹೆರವಟ್ಟಾ ಇದು ಹಳೆಯ ಜಾಗ ಎಂದರೆ ಸರಿ. ಸೀರಿಯಲ್ ನಂ.1 ಮತ್ತು 2 ನನ್ನ ತಂದೆ ಖರೀದಿ ಮಾಡಿರುವ ಆಸ್ತಿ ಎಂದರೆ ಸರಿ . ನನ್ನ ತಂದೆ ಸೀರಿಯಲ್ ನಂ.1 ರಲ್ಲಿರುವ ಮನೆಯಲ್ಲಿಯೇ ವಾಸ್ತವ್ಯ ಮಾಡಿಕೊಂಡಿದ್ದರು ಎಂದರೆ ಸರಿ . ಸೀರಿಯಲ್ ನಂ.1 ರಲ್ಲಿ ಇರುವ ಕಮರ್ಶಿಯಲ್ ಶಾಪ್‌ಗಳನ್ನು ಇತ್ತೀಚೆಗೆ ಕಟ್ಟಲಾಗಿದೆ ಎಂದರೆ ಸರಿ. ಅಂದಾಜು 2004 ರಲ್ಲಿ ಕಟ್ಟಿರಬಹುದು. ಆ ಕಮರ್ಶಿಯಲ್ ಶಾಪ್‌ಗಳಲ್ಲಿ ನನ್ನ ತಂದೆ ಪುಸ್ತಕದ ಅಂಗಡಿ ನಡೆಸುತ್ತಿದ್ದರು ಎಂದರೆ ಸರಿ . ಬಹಳ ವರ್ಷಗಳಿಂದ ನಮ್ಮ ತಂದೆ ಮನೆಯ ಬಳಿ ಇರುವ ಬಾಡಿಗೆ ಅಂಗಡಿಯಲ್ಲಿ ಪುಸ್ತಕದ ಅಂಗಡಿ ನಡೆಸುತ್ತಿದ್ದರು ಎಂದರೆ ಸರಿ . ಇಡೀ ವ್ಯಾಪಾರದಿಂದ ಬಂದ ಹಣದಿಂದ ಆಸ್ತಿಯನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿ. ಕುಮಟಾದಲ್ಲಿರುವ ಅಂಗಡಿಯನ್ನು ಹೊರತುಪಡಿಸಿ ಬೇರೆ ಕಡೆ ಅಂಗಡಿ ಇರಲಿಲ್ಲ. ನನ್ನ ತಂದೆಯ ಮರಣಾನಂತರ ನನ್ನ ತಾಯಿ ಪುಸ್ತಕದ ಅಂಗಡಿ ನಡೆಸುತ್ತಿದ್ದರು , ಅವರಿಗೆ ನನ್ನ ಅಣ್ಣ ಸಹಾಯ ಮಾಡುತ್ತಿದ್ದನು . ತಾಯಿ ತೀರಿಕೊಂಡ ನಂತರ ಬುಕ್ ಸ್ಟಾಲ್ ಅನ್ನು ಸ್ವಲ್ಪ ದಿನ ಬಂದ್ ಇಟ್ಟಿದ್ದೆವು. ಲಾಕ್ ಡೌನ್ ನಂತರ ನಾನು ಹಾಗೂ ನನ್ನ ಸಹೋದರಿ ವಂದನಾ ಹೆಗಡೆ ಅಂಗಡಿ ನಡೆಸುತ್ತಿದ್ದೆವು. 4 ವರ್ಷ ನಾನು ಹಾಗೂ ನನ್ನ ಸಹೋದರಿ ಅಂಗಡಿ ನಡೆಸಿರುತ್ತೇವೆ . 4 ವರ್ಷ ಅವಧಿಯಲ್ಲಿ ಅಂಗಡಿಯಲ್ಲಿ ನಾನೇ ಹೆಚ್ಚು ಕುಳಿತುಕೊಳ್ಳುತ್ತಿದ್ದೆ. 2 ನೇ ಪ್ರತಿವಾದಿ ಇಚಲ್‌ಕರಂಜಿಯಿಂದ ಬಂದು – ಹೋಗಿ ಮಾಡುತ್ತಿದ್ದರು. ಈಗ 2 ನೇ ಪ್ರತಿವಾದಿಯೇ ಅಂಗಡಿ ನೋಡಿಕೊಳ್ಳುತ್ತಿದ್ದಾರೆ. ವಾಸ್ತವ್ಯದ ಮನೆಯನ್ನೂ ಕೂಡ ನಾನೇ ನೋಡಿಕೊಂಡಿರುತ್ತೇನೆ. ಈಗ 2 ವರ್ಷದಿಂದ 2 ನೇ ಪ್ರತಿವಾದಿ ಅಂಗಡಿ ನೋಡಿಕೊಳ್ಳುತ್ತಿದ್ದಾರೆ. ಈಗ 2 ವರ್ಷದಿಂದ ಮನೆಯಿಂದ ನಮ್ಮನ್ನು ಹೊರಹಾಕಿ ಅವರೇ ಇದ್ದಾರೆ . ಅಂಗಡಿ ಹಾಗೂ ಮನೆಯನ್ನು ಅವರೇ ನೋಡಿಕೊಳ್ಳುತ್ತಿದ್ದಾರೆ. ಅಂಗಡಿಯಿಂದ ಬರುವ ಉತ್ಪನ್ನ 2 ನೇ ಪ್ರತಿವಾದಿಯೇ ತೆಗೆದುಕೊಳ್ಳುತ್ತಿದ್ದಾರೆ. ದಾವಾ

'ಅ' ಶೆಡ್ಯೂಲ್ ಸೀರಿಯಲ್ ನಂ. 4 ರಿಂದ 14 ರಿಂದ ಬರುವ ಉತ್ಪನ್ನವನ್ನೂ ಕೂಡ 2 ನೇ ಪ್ರತಿವಾದಿಯೇ ತೆಗೆದುಕೊಳ್ಳುತ್ತಿದ್ದಾರೆ. ತಂದೆ ಮತ್ತು ತಾಯಿಯ ಅನಾರೋಗ್ಯದ ಸಂದರ್ಭದಲ್ಲಿ 3 ನೇ ಪ್ರತಿವಾದಿ ಪ್ರತಿದಿನ ಬಂದು ನೋಡಿಕೊಂಡು ಹೋಗುತ್ತಿದ್ದರು. ತಂದೆ ಮೃತಪಟ್ಟ ನಂತರ 3 ನೇ ಪ್ರತಿವಾದಿಯೇ ತಾಯಿಯನ್ನು ನೋಡಿಕೊಂಡಿರುತ್ತಾರೆ. ನಾನು ಬಂದು -ಹೋಗುತ್ತಿದ್ದೆ. ತಂದೆ-ತಾಯಿ ಮೃತಪಟ್ಟ ನಂತರ ಅವರ ಅಂತ್ಯಕ್ರಿಯೆಯನ್ನು 3 ನೇ ಪ್ರತಿವಾದಿಯೇ ಮಾಡಿರುತ್ತಾರೆ. ಬಹಳ ವರ್ಷಗಳಿಂದ 3 ನೇ ಪ್ರತಿವಾದಿ ಬಾಡಿಗೆ ಮನೆಯಲ್ಲೇ ವಾಸವಾಗಿದ್ದಾರೆ ಎಂದರೆ ಸರಿ . ಬಾಡಿಗೆ ಅಂಗಡಿಯಲ್ಲಿಯೇ ಪುಸ್ತಕದ ವ್ಯಾಪಾರವನ್ನು ನಡೆಸುತ್ತಿದ್ದಾರೆ ಎಂದರೆ ಸರಿ. ಅದರಿಂದ ಬಂದ ಉತ್ಪನ್ನದಿಂದ ಜೀವನ ನಡೆಸುತ್ತಿದ್ದಾರೆ ಎಂದರೆ ಸರಿ. ದಾವಾ ಪರಿಶಿಷ್ಟದಿಂದ ಬಂದಂತಹ ಉತ್ಪನ್ನವನ್ನು ಅವರು ತೆಗೆದುಕೊಂಡಿಲ್ಲ ಎಂದರೆ ಸರಿ.

**(ಈ ಹಂತದಲ್ಲಿ 3 ನೇ ಪ್ರತಿವಾದಿ ಪರ ವಕೀಲರ ವಿನಂತಿ ಮೇರೆಗೆ ಮುಂದುವರಿದ ಪಾಟೀ ಸವಾಲು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.